ಕರ್ನಾಟಕ ಸರ್ಕಾರ

**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ**
**ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

**329 ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರರ ಹುದ್ದೆಗಳಿಗೆ ನೇರ ನೇಮಕಾತಿ 2018-19**

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-2/2017-18 ದಿನಾಂಕ: 10-04-2017**

**ಪ್ರಕಟಣೆ**

ಈ ಕಛೇರಿಯ ದಿನಾಂಕ: 03.01.2019 ರ ಪ್ರಕಟಣೆಯಲ್ಲಿ 329 ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಸದರಿ ಪ್ರಕಟಣೆಯಲ್ಲಿ ಬಿ.ಎಸ್ಸಿ. (ವಿಜ್ಞಾನ) ಕೋಟಾದಡಿ ಶ್ರೀ ಮಂಜುನಾಥ ಎಸ್. ಹಾಗೂ ಶ್ರೀ ರಂಜಿತ್ ಕುಮಾರ್ ಎಸ್. ಈ ಇಬ್ಬರು ಅಭ್ಯರ್ಥಿಗಳ ಪದವಿ ಅಂಕಪಟ್ಟಿಗಳ ಕುರಿತಂತೆ ಸಂಬಂಧಿಸಿದ ವಿಶ್ವವಿದ್ಯಾಲಯದಿಂದ ಸ್ಪಷ್ಟೀಕರಣ ಪಡೆಯಬೇಕಿದ್ದು, ಈ ಸಂಬಂಧ ಸದರಿಯವರ ಆಯ್ಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ. ಪ್ರಸ್ತುತ ಈ ಇಬ್ಬರು ಅಭ್ಯರ್ಥಿಗಳ ಕುರಿತಂತೆ ಸಂಬಂಧಿಸಿದ ಪ್ರಾಧಿಕಾರಗಳಿಂದ ಸ್ಪಷ್ಟೀಕರಣ ಪಡೆದಿದ್ದು, ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಹುದ್ದೆಗೆ ಅಂತಿಮವಾಗಿ ಆಯ್ಕೆ ಮಾಡಲಾಗಿದೆ.

ಶ್ರೀ ಶಿವಶಂಕರ್ ಎ. ವಿ. ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಅಭ್ಯರ್ಥಿ ಇವರು ಪದವಿ ಅಂಕಗಳನ್ನು ತಪ್ಪಾಗಿ ನಮೂದಿಸಿದ್ದರಿಂದ ಸದರಿಯವರನ್ನು ದಿನಾಂಕ: 03.01.2019 ರ ಪ್ರಕಟಣೆಯಲ್ಲಿ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿರುತ್ತದೆ. ಆದರೆ, ಸದರಿಯವರು ಈ ಕುರಿತಂತೆ ಆಕ್ಷೇಪಣೆ ಸಲ್ಲಿಸಿ, ತಾನು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಸಿ.ಜಿ.ಪಿ.ಎ. ಗ್ರೇಡ್ ಅಂಕಗಳು 10 ಕ್ಕೆ 8.31 ಎಂದು ಗ್ರೇಡ್ ಪಾಯಿಂಟ್‌ನಲ್ಲಿ ನಮೂದಿಸಿ, ಪದವಿ ಶೇಕಡವಾರು ಅಂಕ 81.26 ಎಂದು ಸರಿಯಾಗಿ ನಮೂದಿಸಿರುವುದಾಗಿ ತಿಳಿಸಿರುತ್ತಾರೆ. ಈ ಕುರಿತಂತೆ ಪರಿಶೀಲಿಸಿದಾಗ ಸದರಿಯವರ ಆಕ್ಷೇಪಣೆಯು ಸಿಂಧುವಾಗಿರುತ್ತದೆ. ಆದ್ದರಿಂದ, ಸದರಿಯವರ ನೈಜ ಶೇಕಡವಾರು ಅಂಕಗಳನ್ನು ಪರಿಗಣಿಸಿ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಹುದ್ದೆಗೆ ಆಯ್ಕೆ ಮಾಡಿದ್ದು, ಅಂತಿಮ ಆಯ್ಕೆ ಪಟ್ಟಿಯನ್ನು ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ದಿನಾಂಕ: 27-09-2019
ಸ್ಥಳ: ಬೆಂಗಳೂರು

**Deputy Range Forest Officer (Science)**

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–2/2017–18 ದಿನಾಂಕ: 10–04–2017**

**1:1 (Post:Candidate) Final Selection List**

| Merit Sl.No. | Roll Number | Name of the Candidate | Final Selected Category | ನೇಮಕಾತಿ ಆದೇಶ ಹೊರಡಿಸಬೇಕಾದ ಪ್ರಾಧಿಕಾರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನೇಮಕಾತಿ ಪ್ರಾಧಿಕಾರಿ |
|---|---|---|---|---|
| 36(A) | 402475 | MANJUNATHA S | GM - GENERAL | CCF, Chikkamagaluru |
| 53(A) | 400007 | SHIVASHANKAR A V | 3A - GENERAL | CCF, Bangalore |
| 60(A) | 402322 | RANJITH KUMAR S | 2A - GENERAL | CCF, Mangalore |

**ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಹುದ್ದೆಗೆ ಈ ಮೇಲ್ಕಾಣಿಸಿದ ಅಭ್ಯರ್ಥಿಗಳ ಆಯ್ಕೆಯು ಈ ಕೆಳಗಿನ ಸತ್ಯಾಪನೆಗೆ (Verification) ಒಳಪಟ್ಟಿರುತ್ತದೆ.**

1) ಸಂಬಂಧಪಟ್ಟ ಪ್ರಾಧಿಕಾರದಿಂದ ಅಭ್ಯರ್ಥಿಗಳ ಅಂಕ ಪಟ್ಟಿಯ ಸತ್ಯಾಪನೆ.
2) ಸಂಬಂಧಪಟ್ಟ ಜಿಲ್ಲೆಯ ಜಾತಿ – ಪರಿಶೀಲನಾ ಸಮಿತಿಯಿಂದ ಜಾತಿ ಪ್ರಮಾಣ ಪತ್ರದ ಸತ್ಯಾಪನೆ.
3) ಸಂಬಂಧಪಟ್ಟ ಪರಿಶೀಲನಾ ಸಮಿತಿಯಿಂದ ಗ್ರಾಮೀಣ / ಕನ್ನಡ / ಮಾಜಿ ಸೈನಿಕ / ಯೋಜನಾ ನಿರಾಶ್ರಿತ ಪ್ರಮಾಣ ಪತ್ರದ ಸತ್ಯಾಪನೆ.
4) ಸಂಬಂಧಪಟ್ಟ ಜಿಲ್ಲಾ ಪೋಲೀಸ್ ಅಧೀಕ್ಷಕರಿಂದ ಸಮಾಜಘಾತಕ ಕೃತ್ಯಗಳಲ್ಲಿ ತೊಡಗಿಲ್ಲದೇ ಇರುವ ಬಗ್ಗೆ / ಅಪರಾಧಿಕರಣ ತನಿಖೆಗೆ ಒಳಪಡದೇ ಇರುವ ಬಗ್ಗೆ ಸತ್ಯಾಪನೆ.

Date: 27-09-2019
Place: Bangalore

Principal Chief Conservator of Forests
(Head of Forest Force)